ಸವಿ ಸವಿ ನೆನಪು..

# ಮರೆಯಲಾಗದ ಹಾಸ್ಟೆಲ್ ಬದುಕು

■ ಡಾ.ಪ್ರೇಮಲತ ಬಿ.



ಇದು 23 ವರ್ಷಗಳ ಹಿಂದೆ ನಡೆದ ಘಟನೆ. ನಾನಾಗ ಬೆಂಗಳೂರು ವೈದ್ಯಕೀಯ ಕಾಲೇಜಿನ ಲೇಡಿಸ್ ಹಾಸ್ಟೆಲಿನಲ್ಲಿದ್ದೆ. ದೊಡ್ಡ ಕೋಣೆಯಾದ್ದರಿಂದ ನಾಲ್ವರು ಹುಡುಗಿಯರು ಒಂದೇ ಕೋಣೆಯಲ್ಲಿದ್ದೆವು. ಇಬ್ಬರು ಅವರ ಓದು ಮುಗಿಸಿ ಜಾಗ ಖಾಲಿ ಮಾಡಿದ್ದರು. ರಜೆ ಇದ್ದ ಕಾರಣ ನಾನು ಪಕ್ಕದಲ್ಲೇ ಇದ್ದ ನನ್ನೂರು ತುಮಕೂರಿಗೆ ಹೋಗಿದ್ದೆ. ನನ್ನ ಕೋಣೆಯಲ್ಲಿ ಕೇರಳದಿಂದ ಬಂದಿದ್ದ ವೈದ್ಯಕೀಯ ವಿದ್ಯಾರ್ಥಿನಿ ಮಾತ್ರ ಉಳಿದಿದ್ದಳು. ಹೊಸ ವರ್ಷ ಶುರುವಾಗುತ್ತಿದ್ದ ಕಾರಣ ಖಾಲಿಯಾಗಿದ್ದ ಜಾಗಕ್ಕೆ ಇಬ್ಬರು ಹೊಸ ವಿದ್ಯಾರ್ಥಿಗಳನ್ನು ನಮ್ಮ ಕೋಣೆಗೆ ಹಾಕಿದ್ದರು.

ಈ ಕೇರಳದ ವಿದ್ಯಾರ್ಥಿನಿ ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಮೆರಿಕದಲ್ಲಿ ಮುಗಿಸಿದ್ದವಳು. ತುಂಬ ಶ್ರೀಮಂತ ಕುಟುಂಬದ ನಯ ನಾಜೂಕುಗಳಲ್ಲಿ ಬೆಳೆದವಳು. ಕನ್ನಡ ಒಂದಕ್ಷರವೂ ಬರುತ್ತಿರಲಿಲ್ಲ. ಹೊಸದಾಗಿ ಬಂದಿದ್ದ ಮೈಸೂರು ಮತ್ತು ಚಿಕ್ಕಮಗಳೂರಿನ ಈ ಹೊಸ ವಿದ್ಯಾರ್ಥಿನಿಯರು ಒಂದೇ ತರಗತಿಯಗೆ ಭರ್ತಿಯಾಗಿದ್ದವರು. ಹಾಗಾಗಿ ಬಹಳ ಬೇಗ ಹೊಂದಾಣಿಕೆಯಾಗಿದ್ದರು. ತುಂಟಾಟವೇ ಮೈವೆತ್ತಂತಿದ್ದ ಇವರು ನಮ್ಮ ಕೋಣೆಯ ಎಲ್ಲ ರೀತಿ ರಿವಾಜುಗಳನ್ನು ಮುರಿದಿದ್ದರು. ಶಾಂತಿಯನ್ನು ಕದಡಿದ್ದರು. ಕೇರಳದ ಹುಡುಗಿ ಸೀನಿಯರ್ ಆದರೂ ಇವರನ್ನು ಹದ್ದುಬಸ್ತಿನಲ್ಲಿಡಲಾಗಿರಲಿಲ್ಲ. ಬಹುಶಃ ಹೊಸದಾಗಿ ಬಂದ ಹುಡುಗಿಯರೇ ಕೇರಳದವಳಿಗೆ ರ್‍ಯಾಗಿಂಗ್ ಮಾಡಿದಂತಿತ್ತು. ಅದಕ್ಕೆ ಅವಳೊಂದು ಉಪಾಯ ಮಾಡಿದ್ದಳು.

ನಾನು ರಜೆ ಮುಗಿಸಿ ಹಿಂತಿರುಗಿದೆ. ಕೋಣೆಯ ಬಾಗಿಲು ತೆರೆದು ಒಳಗಡಿಯಿಟ್ಟಾಗ ಈ ಮೂವರು ಕೋಣೆಯಲ್ಲಿಯೇ ಇದ್ದರು. 'ಹಾಯ್' ಎಂದು ಎಲ್ಲರಿಗೂ ವಂದಿಸಿದೆ. ಹೊಸಬರಲ್ಲಿ ಇದ್ದಕ್ಕಿದ್ದಂತೆ ಚಡಪಡಿಕೆ ಕಾಣಿಸಿತು. ಜೋರಾಗಿ ಹಾಕಿಕೊಂಡಿದ್ದ ಟೇಪ್ ರೆಕಾರ್ಡರನ್ನು ಬಂದ್ ಮಾಡಿದರು. ನನ್ನ ಮಂಚದವರೆಗೂ ಬಿಸಾಕಿಕೊಂಡಿದ್ದ ಅವರ ವಸ್ತುಗಳನ್ನು ಹಿಂದಕ್ಕೆಳೆದುಕೊಂಡರು. ನನ್ನದು ಸರಳ ಸ್ವಭಾವವೇ ಆದರೂ ಸ್ವಲ್ಪ ಪರಿಚಯ ಬೆಳೆಯುವವರೆಗೆ ಗಂಭೀರ ಅಂತಲೇ ಹೇಳಬೇಕು. ಮನೆಯಿಂದ ತಂದಿದ್ದ ಸಾಮಾನುಗಳನ್ನೆಲ್ಲ ಒಪ್ಪವಾಗಿ ಜೋಡಿಸಿಕೊಳ್ಳತೊಡಗಿದೆ. ಹೊಸಬರು ಪಿಸ ಪಿಸನೆಂದು ಮಾತಾಡಿಕೊಳ್ಳುತ್ತಿದ್ದರು. ಕೇರಳದವಳ ಮುಖದಲ್ಲಿ ಸಮಾಧಾನ ಮೂಡಿದಂತೆ ಕಾಣುತಿತ್ತು. ಯಾಕಪ್ಪಾ ಇವರು ಹೀಗಾಡುತ್ತಿದ್ದಾರೆ ಎಂದುಕೊಂಡರೂ ಆಗ ತಾನೇ ಕಾಲಿಟ್ಟಿದ್ದ ನಾನು ಸುಮ್ಮನಿದ್ದೆ. ಕೇರಳದವಳನ್ನೂ ಮಾತಾಡಿಸಿದೆ. ಹೊಸಬರಿಬ್ಬರೂ ಅಲ್ಪಸ್ವಲ್ಪ ಬೆದರಿದಂತಿತ್ತು. ಅರ್ಧ ಗಂಟೆ ಕಳೆಯುವಲ್ಲಿ ಹೊಸಬರಿಬ್ಬರೂ ರೂಮೂ ಖಾಲಿ ಮಾಡಿ ತಮ್ಮ ಗೆಳತಿಯರ ಕೋಣೆಗೆ ತೆರಳಿದರು.

ಕೇರಳದವಳು ನಿಟ್ಟುಸಿರಿಟ್ಟು ನಮ್ಮ ಕೋಣೆಗೆ ಬಂದ ಹೊಸಬರ ತಂಟೆಗಳನ್ನು ವರ್ಣಿಸಿದಳು. 'ಭಯಾನಕ ಘಟಾನುಘಟಿಯರು, ಹುಷಾರಾಗಿರು' ಎಂದು ಎಚ್ಚರಿಸಿದಳು. ಇಡೀ ಕೋಣೆಯ ಶಾಂತತೆಗೆ ಇವರಿಂದ ಒದಗಿರುವ ಕಂಟಕಗಳು ಹೇಳಿಕೊಂಡಳು. ನಾನು ಹೊಸಬರಿಗಿಂತ ಸೀನಿಯರ್ ಆದರೂ, ಕೇರಳದವಳು ನನಗಿಂತ ಒಂದು ವರ್ಷ ದೊಡ್ಡವಳು. ಆದರೆ ಅವಳದು ಒಂದು ರೀತಿಯ ಅಂತರ್ಮುಖಿ ಸ್ವಭಾವವಾಗಿತ್ತು. ನಮ್ಮ ಗೆಳೆತನ ಸೌಹಾರ್ದವಾಗಿ ಅಂತೂ ಇತ್ತು.

ನಾನು ಕೋಣೆಯಲ್ಲಿದ್ದರೆ ಅಥವಾ ಕೋಣೆಗೆ ಬಂದರೆ ಈ ಹೊಸ ಹುಡುಗಿಯರಲ್ಲಿ ಚಡಪಡಿಕೆ ಕಾಣುವುದು ಮುಂದುವರೆಯಿತು. ಇದರಿಂದ ನನಗೇ ಮುಜುಗರವಾಗಲು ಶುರುವಾಯಿತು. ನಿಧಾನವಾಗಿ ಅವರೊಡನೆ ಮಾತಿಗೆ ತೊಡಗಿಕೊಂಡೆ. ಮೊದಲಿಗೆ ತಡಬಡಾಯಿಸಿದರೂ ದಿನಕಳೆದಂತೆ ಹೊಸಬರು ಸಮಾಧಾನಕ್ಕೆ ಬಂದರು. ಒಂದು ತಿಂಗಳು ಕಳೆಯುವಷ್ಟರಲ್ಲಿ ಚೆನ್ನಾಗಿ ಗೆಳೆತನ ಬೆಳೆಯಿತು. ಆಗಲೇ ನನಗೆ ನಿಜ ವಿಚಾರ ಗೊತ್ತಾಗಿದ್ದು!

ಹೊಸ ಹುಡುಗಿಯರನ್ನು ಸಂಭಾಳಿಸಲಾಗದ ಕೇರಳದ ಹುಡುಗಿ ಒಂದು ಉಪಾಯ ಮಾಡಿದ್ದಳು. ಹೊಸ ಹುಡುಗಿಯರಿಗೆ ಅವರ ಇನ್ನೊಬ್ಬ ರೂಂ ಮೇಟ್ ಆದ ನನ್ನ ಬಗ್ಗೆ ಇನ್ನಿಲ್ಲದಂತೆ ವರ್ಣಿಸಿ ಹೇಳಿದ್ದಳು. 'ಅವಳು (ನಾನು) ಬರುವವರೆಗೆ ಕಾಯಿರಿ, ಅವಳು ನಿಮ್ಮ ಆಟಗಳನ್ನು ಸಹಿಸುವುದಿಲ್ಲವೆಂತಲೂ, ನಾನು ಕೋಪಿಸಿಕೊಂಡರೆ ಹಾಸ್ಟೆಲಿನ ಮತ್ತು ಕಾಲೇಜಿನ ಅವರ ಬದುಕು ಅಸಹನೀಯವಾಗಬಲ್ಲದೆಂತಲೂ' ಹೇಳಿದ್ದಳು. ನನಗೆ ಬೆಂಗಳೂರಿನ ತುಂಬ ಸ್ನೇಹಿತರು ಇದ್ದಾರೆಂತಲೂ, ನನ್ನ ಮುಂದೆ ಅವರು ಆದಷ್ಟು ಗಂಭೀರವಾಗಿಯೂ, ಅಡಕವಾಗಿಯೂ ಇರಬೇಕಂತಲೂ ಎಚ್ಚರಿಕೆ ಕೊಟ್ಟಿದ್ದಳು. ಸಾಕಷ್ಟು ಆಂಗ್ಲ ಕಾದಂಬರಿಗಳನ್ನು ಓದುತ್ತಿದ್ದ ಈ ಕೇರಳದ ಹುಡುಗಿಯ ಮಾತುಗಳು ಹೊಸಬರಲ್ಲಿ ನನ್ನ ಬಗ್ಗೆ ಅಪಾರ ಗೌರವ ಭಯಗಳನ್ನು ಕಲ್ಪಿಸಿದ್ದವು. ನಾನೂ ಅವರ ಬಗ್ಗೆ ಕೇರಳದ ಹುಡುಗಿ ನನಗೆ ಹೇಳಿದ್ದನ್ನೆಲ್ಲ ಹೇಳಿ ನೀವೆಂದೂ ನನಗೆ ಅಷ್ಟು ಭಯಾನಕವಾಗಿ ಕಂಡಿದ್ದೇ ಇಲ್ಲ ಅಂತ ಹೇಳಿದೆ. ಇದನ್ನೆಲ್ಲ ಹೇಳಿಕೊಂಡು ನಾವು ಹೊಟ್ಟೆ ಹಿಡಿದುಕೊಂಡು ನಕ್ಕಿದ್ದೆವು. ಅಂದಿನಿಂದ ನಮ್ಮ ಗೆಳೆತನ ಹೇಗೆ ಬೆಳೆಯಿತೆಂದರೆ ಮುಂದೆ ಇಡೀ ಹಾಸ್ಟೆಲಿನಲ್ಲೂ, ಕಾಲೇಜಿನಲ್ಲೂ ನಾವು ಗೆಳೆತನಕ್ಕೆ ಹೆಸರುವಾಸಿಯಾದೆವು. ಎಲ್ಲರೂ ಪ್ರತಿಯೊಬ್ಬರ  ಊರುಗಳಿಗೂ, ಮನೆಗಳಿಗೂ ಹೋಗಿ ಬಂದೆವು. ತಂದೆ ತಾಯಿಯರ ಪರಿಚಯ ಬೆಳೆಯಿತು. ಒಟ್ಟಾರೆ ವರ್ಷಕ್ಕೆರಡು ಬಾರಿ ಚಾರಣಗಳಲ್ಲಿ ತೊಡಗಿಕೊಳ್ಳುತ್ತಿದ್ದೆವು. ಊರುಗಳು, ಧರ್ಮ, ಜಾತಿ, ಸಂಪತ್ತು, ಬುದ್ಧಿವಂತಿಕೆ ಯಾವುದೂ ನಮ್ಮ ಸ್ನೇಹಕ್ಕೆ ಅಡ್ಡಿಯಾಗಲೇ ಇಲ್ಲ. ಕೇರಳದ ಹುಡುಗಿಗೂ ಎಲ್ಲರ ಜೊತೆ ಸೇರಿ ಬದುಕಲು ಹೇಳಿಕೊಟ್ಟೆವು. ಅವಳು ನಮ್ಮಿಂದ ಸ್ವಲ್ಪ ದೂರ ಇದ್ದುಕೊಂಡೇ ಓದು ಮುಗಿಸಿಕೊಂಡು ಹೋದಳು. ಎಲ್ಲರೂ ಸೇರಿ ಅವಳನ್ನು ಬೀಳ್ಕೊಟ್ಟೆವು.

ಇವತ್ತು ಎಲ್ಲರೂ ಉನ್ನತ ಸ್ಥಾನಗಳಲ್ಲಿದ್ದೇವೆ. ಭಾರತ, ಇಂಗ್ಲೆಂಡ್, ಕತಾರ್ ದೇಶಗಳಲ್ಲಿ ನಮ್ಮ ವಾಸವಾದರೂ ಬೆಂಗಳೂರಲ್ಲಿ ಒಟ್ಟಿಗೆ ಸೇರುವ ಅವಕಾಶ ಬಂದಾಗೆಲ್ಲ ಗಂಡ, ಮಕ್ಕಳನ್ನು ಹಿಂದಿಕ್ಕಿ ಒಟ್ಟಿಗೆ ಕೂಡಿ ಜೊತೆಯಲ್ಲಿ ಕಳೆದ ಹಳೆಯ ದಿನಗಳ ಸವಿನೆನಪಲ್ಲಿ ತೇಲುತ್ತೇವೆ. ಕೊನೆಯ ಭಾರಿ ಹೀಗೆ ಸೇರಿದಾಗ ಹಳೆಯದನ್ನೆಲ್ಲ ಮೆಲುಕು ಹಾಕಿ, ಸಾಮಾಜಿಕ ತಾಣಗಳನ್ನು ಕೆದಕಿ ಈ ಕೇರಳದ ಹುಡುಗಿಗೆ ನಾವೆಲ್ಲ ಒಟ್ಟಾಗಿದ್ದ ಒಂದು ಫೋಟೋ ಕಳಿಸಿದೆವು. ಉತ್ತರ ಇನ್ನೂ ಬಂದಿಲ್ಲ. ■